# **ಕರ್ನಾಟಕ ಸರ್ಕಾರ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1003 (884)**
**ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 20.08.2025**
**ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 2022 ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಮತ್ತು ಭಾರಿ ಮಳೆಯಿಂದಾಗಿ ಮನೆಗಳಿಗೆ ಪರಿಹಾರ ಪಾವತಿಸಿರುವ ಪ್ರಕರಣಗಳ ('ಎ', 'ಬಿ' ಮತ್ತು 'ಸಿ' ವರ್ಗವಾರು) ಸಂಖ್ಯೆ ಹಾಗೂ ವಿತರಿಸಿದ ಪರಿಹಾರ ಮೊತ್ತ ಎಷ್ಟು; (ಪ್ರಕರಣವಾರು ಮಾಹಿತಿ ನೀಡುವುದು)</td><td>2022ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಮತ್ತು ಭಾರಿ ಮಳೆಯಿಂದಾಗಿ ಮನೆಗಳಿಗೆ ಪರಿಹಾರ ಪಾವತಿಸಿರುವ ಪ್ರಕರಣಗಳ (ಎ, ಬಿ ಮತ್ತು ಸಿ ವರ್ಗವಾರು) ಸಂಖ್ಯೆ ಹಾಗೂ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಹಾನಿಯಾದ ಮನೆಯ ವರ್ಗ</th><th>ಹಾನಿಯಾದ ಮನೆಗಳ ಸಂಖ್ಯೆ</th><th>ನೀಡಲಾದ ಪರಿಹಾರ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>ಎ ವರ್ಗ</td><td>157 ಪ್ರಕರಣಗಳು</td><td>ರೂ. 1,52,46,300/-</td></tr>
<tr><td>2</td><td>ಬಿ1 ವರ್ಗ</td><td>153 ಪ್ರಕರಣಗಳು</td><td>ರೂ. 1,68,17,400/-</td></tr>
<tr><td>3</td><td>ಬಿ2 ವರ್ಗ</td><td>99 ಪ್ರಕರಣಗಳು</td><td>ರೂ. 1,05,10,500/-</td></tr>
<tr><td>4</td><td>ಸಿ ವರ್ಗ</td><td>81 ಪ್ರಕರಣಗಳು</td><td>ರೂ. 33,60,500/-</td></tr>
<tr><td></td><td>ಒಟ್ಟು</td><td>490 ಪ್ರಕರಣಗಳು</td><td>ರೂ. 4,59,34,700/-</td></tr>
</table></td></tr>
<tr><td>ಆ)</td><td>ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಸೂಕ್ತ ದಾಖಲೆ ಇಲ್ಲದೆ ಪರಿಹಾರ ಮೊತ್ತ ಮಂಜೂರು ಮಾಡಿರುವುದು ಧೃಡಪಟ್ಟಿದೆ; ಇದರ ಒಟ್ಟು ಮೊತ್ತ ಎಷ್ಟು;</td><td>ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ದಿನಾಂಕ: 07.07.2025 ರಂದು ಸದರಿ ಪ್ರಕರಣದ ಬಾಬ್ತು ಸಮಗ್ರ ತನಿಖೆ ನಡೆಸಿ ತನಿಖಾ ವರದಿಯನ್ನು ಸಲ್ಲಿಸಲು ಉಪವಿಭಾಗಾಧಿಕಾರಿ, ಮಂಡ್ಯ /ಪಾಂಡವಪುರ ರವರ ನೇತೃತ್ವದಲ್ಲಿ ತನಿಖಾ ತಂಡವನ್ನು ಪುನರ್ ರಚಿಸಲಾಗಿದ್ದು, ತನಿಖೆ ವಿಚಾರಣಾ ಹಂತದಲ್ಲಿರುವುದರಿಂದ, ತನಿಖಾ ವರದಿಯನ್ನು ನಿರೀಕ್ಷಿಸಲಾಗಿದೆ.</td></tr>
<tr><td>ಇ)</td><td>ಸಹಾಯಕ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು, ಜಿಲ್ಲಾಧಿಕಾರಿ ಕಛೇರಿ ಮಂಡ್ಯ ಇವರ ನೇತೃತ್ವದ ತನಿಖಾ ತಂಡ ಹಾಗೂ ಮೈಸೂರಿನ ಪ್ರಾದೇಶಿಕ ಆಯುಕ್ತರ ಕಛೇರಿ ವತಿಯಿಂದ ನಡೆದ ತನಿಖೆಯಿಂದಲೂ ಭಾರಿ ಮೊತ್ತದ ಹಣ ದುರುಪವಾಗಿರುವುದು ಸಾಬೀತಾಗಿದ್ದರೂ ಈವರೆವಿಗೂ ಆರೋಪಿತ ನೌಕರರು/ಅಧಿಕಾರಿಗಳ ವಿರುದ್ಧ ಕ್ರಮವಾಗದಿರಲು ಕಾರಣವೇನು;</td><td>ಶ್ರೀ ಟಿ ಕೆ ಗೋಪಾಲ್ ರವರ ದೂರಿನ ಮೇರೆಗೆ, ತನಿಖಾ ತಂಡದವರು ನೀಡಿದ್ದ ವರದಿಯನ್ನು ಆಧರಿಸಿ ತಪ್ಪಿತಸ್ಥ ನೌಕರರ ವಿರುದ್ಧ ದೋಷಾರೋಪಣ ಪಟ್ಟಿ 1 ರಂದ 4 ಅನ್ನು ಜಾರಿ ಮಾಡಿ, ವಿಚಾರಣೆಗೊಳಪಡಿಸಿ ಉಪವಿಭಾಧಿಕಾರಿ ಮಂಡ್ಯ ರವರನ್ನು ವಿಚಾರಣಾ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ. ಪ್ರಸ್ತುತ ನೌಕರರ ವಿರುದ್ಧದ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.<br><br>ಮುಂದುವರೆದು ಈ ಪ್ರಕರಣದಲ್ಲಿ ಮತ್ತಿಬ್ಬರೂ ನೀಡಿರುವ ದೂರಿನ ಮೇರೆಗೆ ಸಮಗ್ರ ತನಿಖೆಯು ಅವಶ್ಯಕವಾಗಿರುವ ಕಾರಣ ಜಿಲ್ಲಾಧಿಕಾರಿ ಮಂಡ್ಯ ಜಿಲ್ಲೆ ರವರ ದಿನಾಂಕ: 07.07.2025 ರ ಅಧಿಕೃತ ಜ್ಞಾಪನದನ್ವಯ ಪರಿಷ್ಕೃತ ತನಿಖಾ ತಂಡವನ್ನು ಜಿಲ್ಲಾಧಿಕಾರಿಗಳಿಂದ ರಚಿಸಲಾಗಿದ್ದು, ತನಿಖೆಯು ವಿಚಾರಣಾ ಹಂತದಲ್ಲಿರುತ್ತದೆ. ತನಿಖಾ ವರದಿ ಸ್ವೀಕೃತವಾದ ಕೂಡಲೇ ತಪ್ಪಿತಸ್ಥ ನೌಕರರ / ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.</td></tr>
</table>

| | | |
|---|---|---|
| ಈ) | ಶಾಖಾ ಮುಖ್ಯಸ್ಥರು 'ಪ್ರಕರಣವು ಅನುಮಾನದಿಂದ ಇರುತ್ತದೆ...' ಎಂದು ತಮ್ಮ ಟಿಪ್ಪಣಿಯಲ್ಲಿ ನಮೂದಿಸಿದ್ದರೂ ಮತ್ತೊಮ್ಮೆ ದಾಖಲೆಗಳನ್ನು ಪರಿಶೀಲಿಸದೆ ಪರಿಹಾರ ಮಂಜೂರು ಮಾಡಿರುವಲ್ಲಿ ವಿಷಯ ನಿರ್ವಾಹಕರಿಂದ ತಹಶೀಲ್ದಾರ್ ವರೆಗೂ ಕರ್ತವ್ಯ ಲೋಪ ಎಸಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುವುದರಿಂದ ಇತರ ನೌಕರರು/ಅಧಿಕಾರಿಗಳ ವಿರುದ್ಧ ಕ್ರಮವಹಿಸದಿರುವುದು ಏಕೆ: ಈ ಕುರಿತು ಸರ್ಕಾರದ ನಿಲುವೇನು: | ಜಿಲ್ಲಾಧಿಕಾರಿ ಮಂಡ್ಯ ಜಿಲ್ಲೆ ರವರ ದಿನಾಂಕ:07-07-2025ರಂತೆ ಪರಿಷ್ಕೃತ ತನಿಖಾ ತಂಡದವರು ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸಿದ ನಂತರ ತಪ್ಪಿತಸ್ಥ ನೌಕರರ / ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |
| ಉ) | ಜಿಲ್ಲಾಧಿಕಾರಿ ಮಂಡ್ಯ ರವರು (ಅ.ಸ.ಪ. MDC-DEVOCAL/38/2022-JUD SEC-DC MANDYA ದಿನಾಂಕ:15.07.2023) ಈ ಪ್ರಕರಣ ಕುರಿತು ಸಮಗ್ರ ವರದಿ ನೀಡಲು ನೇಮಿಸಿದ್ದ ಉಪವಿಭಾಗಾಧಿಕಾರಿ, ಪಾಡಂವಪುರ ಉಪವಿಭಾಗ, ಪಾಡಂವಪುರ ನೇತೃತ್ವದ ತ್ರಿಸದಸ್ಯ ಸಮಿತಿ ವರದಿ ಸಲ್ಲಿಸಿದೆಯೇ; ಇದ್ದಲ್ಲಿ, ಪೂರ್ಣ ವರದಿ ನಿಡುವುದು. ಹಾಗಿದ್ದಲ್ಲಿ ಸೂಕ್ತ ಕಾರಣಗಳನ್ನು ತಿಳಿಸುವುದು. | ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ರವರಿಂದ ಉಪವಿಭಾಗಾಧಿಕಾರಿ ಪಾಂಡವಪುರ ರವರ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ರಚಿಸಿದ್ದು, ಸದರಿ ಅವಧಿಯಲ್ಲಿದ್ದ ಉಪವಿಭಾಗಾಧಿಕಾರಿಗಳು ಮತ್ತು ಇತರೆ ಇಲಾಖೆಯ ಅಧಿಕಾರಿಗಳು ಕಾರ್ಯದೊತ್ತಡದ ಕಾರಣ ಯಾವುದೇ ವಿಚಾರಣೆ ನಡೆಸಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ. ಆದುದರಿಂದ, ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ದಿನಾಂಕ:07.07.2025 ರಂದು ಸದರಿ ಪ್ರಕರಣದ ಬಾಬ್ತು ಸಮಗ್ರ ತನಿಖೆ ನಡೆಸಿ ತನಿಖಾ ವರದಿಯನ್ನು ಸಲ್ಲಿಸಲು ಉಪವಿಭಾಗಾಧಿಕಾರಿ, ಮಂಡ್ಯ /ಪಾಂಡವಪುರ ರವರ ನೇತೃತ್ವದಲ್ಲಿ ತನಿಖಾ ತಂಡವನ್ನು ಪುನರ್ ರಚಿಸಲಾಗಿದ್ದು, ತನಿಖೆ ವಿಚಾರಣಾ ಹಂತದಲ್ಲಿರುವುದರಿಂದ, ತನಿಖಾ ವರದಿಯನ್ನು ನಿರೀಕ್ಷಿಸಲಾಗಿದೆ.<br><br>ವರದಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಉಪವಿಭಾಗಾಧಿಕಾರಿ ರವರಿಗೆ ಸೂಚಿಸಲಾಗಿದ್ದು, ವರದಿ ಸ್ವೀಕೃತವಾದ ಕೂಡಲೇ ತಪ್ಪಿತಸ್ಥ ನೌಕರರ / ಅಧಿಕಾರಿಗಳ ವಿರುದ್ಧ ಕಾನೂನಿನ ಕ್ರಮ ತುರ್ತಾಗಿ ಕೈಗೊಳ್ಳಲಾಗುವುದು. |
| ಊ) | ಸದರಿ ಪ್ರಕರಣ ಸಂಬಂಧ ಉಪ ವಿಭಾಗಾಧಿಕಾರಿ, ಮಂಡ್ಯ ಉಪ ವಿಭಾಗ, ಮಂಡ್ಯರವರು ವಿಚಾರಣಾ ವರದಿ ಸಲ್ಲಿಸಿದ್ದಾರೆಯೇ? | |

**ಕಂಇ 354 ಟಿಎನ್‌ಆರ್ 2025**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು